**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 124/2022</u>**

ದಿನಾಂಕಃ 01.08.2023
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ -1 ಪ್ರಾಸಾ -1

| | | |
|---|---|---|
| ಹೆಸರು | ಃ | ಬರಿಯ |
| ತಂದೆಯ ಹೆಸರು | ಃ | ಏಳವಯ್ಯ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಕಟುಕನಪಾಳ್ಯ |

<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

2. ನಾನು ಕಟುಕನಪಾಳ್ಯದಲ್ಲಿ ವಾಸವಾಗಿದ್ದೇನೆ. ಚಾಸಾ-2 ನನ್ನ ತಂಗಿ. ಚಾಸಾ-3 ನನ್ನ ತಂಗಿಯ ಗಂಡ. ಮೃತ ಅಟ್ಟ ನನ್ನ ತಮ್ಮ. ಸುಮಾರು ಒಂದೂವರೆ ವರ್ಷದ ಹಿಂದೆ ಚಾಸಾ-2 ಮತ್ತು 3 ರವರು ನಮ್ಮ ಮನೆಯ ಹತ್ತಿರ ಬರುತ್ತಿದ್ದರು. ಆಗ ರಾತ್ರಿ 9.00 ಗಂಟೆ ಸಮಯ. ಅವರನ್ನು ನನ್ನ ತಮ್ಮ ಮೃತ ಅಟ್ಟ ಕರೆಯಲು ಹೋಗಿದ್ದರು. ಅವರು 7 ನೇ ಆರೋಪಿತರ ಜಾಗದ ಮುಖಾಂತರ ಕರೆದುಕೊಂಡು ಬರುತ್ತಿದ್ದರು. 7 ನೇ ಆರೋಪಿ ನಮ್ಮ ಅಕ್ಕ. ಉಳಿದ ಆರೋಪಿತರು ಕೂಡ ನಮ್ಮ ಸಂಬಂಧಿಕರು. 7 ನೇ ಆರೋಪಿತರ ಮನೆ ನಮ್ಮ ಮನೆಯ ಪಕ್ಕದಲ್ಲಿರುತ್ತದೆ. ಎಲ್ಲಾ ಆರೋಪಿತರು ಆಗ 7 ನೇ

Dt.01.08.2023.

ಆರೋಪಿತರ ಮನೆಯ ಹತ್ತಿರವೇ ಇದ್ದರು. ಆಗ ಎಲ್ಲಾ ಆರೋಪಿತರು ನನ್ನ ತಮ್ಮ ಮೃತ ಅಟ್ಟರವರಿಗೆ ನಮ್ಮ ಜಾಗದಲ್ಲಿ ಬರಬೇಡ ಎಂದು ರಿಪೀಸ್ ಪಟ್ಟಿಯಲ್ಲಿ ಹೊಡೆದರು. 2ನೇ ಆರೋಪಿತರು ರಿಪೀಸ್ ಪಟ್ಟಿಯಲ್ಲಿ ಹೊಡೆದರು. ಆಗ ಅಟ್ಟರವರಿಗೆ ರಕ್ತಗಾಯವಾಯಿತ್ತು. ಚಾಸಾ-2 ಮತ್ತು 3 ರವರಿಗೆ ಕೂಡಾ ಹಿಡಿದುಕೊಂಡು ಹೊಡೆಯುತ್ತಿದ್ದರು. ಆನಂತರ ಅಟ್ಟರವರನ್ನು ಮರುದಿನ ಬೆಳ್ಳಗ್ಗೆ ಮಾಗಡಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆನಂತರ ಅಲ್ಲಿಂದ ಬೆಂಗಳೂರಿನ ನಿಮಾನ್ಸ್ ಗೆ ಕರೆದುಕೊಂಡು ಹೋದರು. ಆನಂತರ ಅವರನ್ನು ಮನೆಗೆ ಕರೆದುಕೊಂಡು ಬಂದರು. ಅದರೂ ಅವರ ಗಾಯ ವಾಸಿಯಾಗಿಲ್ಲ. ಒಂದೂವರೆ ತಿಂಗಳ ನಂತರ ರಾಮನಗರ ಆಸ್ಪತ್ರೆಗೆ ಕೆರದುಕೊಂಡು ಬಂದಿದ್ದು ಅಲ್ಲಿ ಅವರು ಮೃತ ಪಟ್ಟರು. ಆಗ ಹೆಣ ಕೊಯಿದು ಶವ ಪರೀಕ್ಷೆ ಮಾಡುತ್ತಾರೆಂದು ಹೆದರಿ ಶವವನ್ನು ಊರಿಗೆ ತಂದು ಅಂತ್ಯ ಕ್ರಿಯೆ ಮಾಡಿದೆವು.. ಮೃತ ಅಟ್ಟ ಆರೋಪಿತರು ರಿಪೀಸ್ ಪಟ್ಟಿಯಿಂದ ಹೊಡೆದ್ದದಕ್ಕೆ ತೀರಿಹೋಗಿರುತ್ತಾರೆ. ಆದರೆ ಈ ಬಗ್ಗೆ ಆಸ್ಪತೆಯ ವೈದ್ಯರಿಗೆ ಮತ್ತು ಪೊಲೀಸರಿಗೆ ತಿಳಿಸಿಲ್ಲ. ಅನಂತರ ಆರೋಪಿತರು ನಿನ್ನ ತಮ್ಮನನ್ನು ಕೊಂದಂತೆಯೇ ನಿನ್ನನ್ನೂ ಕೂಡಾ ಕೊಲ್ಲುತ್ತೇವೆಂದು ಬೆದರಿಕೆ ಹಾಕಿದಾಗ ಈ ಬಗ್ಗೆ ಪೊಲೀಸರಿಗೆ ದೂರು ನೀಡಿದೆ. ನನ್ನ ತಮ್ಮ ಸತ್ತು ಒಂದೂವರೆ ತಿಂಗಳ ನಂತರ ನಾನು ದೂರು ನೀಡಿದೆ. ನನ್ನ ತಮ್ಮ ಅಟ್ಟ ಚಾಸಾ-2 ಮತ್ತು 3 ರವರನ್ನು

Dt.01.08.2023.

ಕರೆದುಕೊಂಡು ಬರುತ್ತಿರುವಾಗ ನಾನು ನನ್ನ ಮನೆಯ ಹತ್ತಿರವೇ ಇದ್ದೆ. ಸೋಲಾರ್ ಲೈಟಿನ ಬೆಳಕಿನಲ್ಲಿ ಆರೋಪಿತರು ನನ್ನ ತಮ್ಮನಿಗೆ ರಿಪೀಸ್ ಪಟ್ಟಿಯಿಂದ ಹೊಡೆದಿದ್ದನ್ನು ನೋಡಿರುತ್ತೇನೆ. ಆ ರಿಪೀಸ್ ಪಟ್ಟಿ ಅವರ ಮನೆಯ ಬಳಿಯೇ ಇತ್ತು. ಅದನ್ನು ನಾನು ಪೊಲೀಸರಿಗೆ ನೀಡಿದೆ. ನಾನು ಕೊಟ್ಟ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ -1 ಎಂತಲೂ ಸಾಕ್ಷಿ ಗುರುತಿಸಿದ ತನ್ನ ಹೆಬ್ಬೆಟ್ಟನ್ನು ನಿಶಾನೆ ಪಿ -1(ಎ) ಎಂತಲೂ ಗುರುತಿಸಿದೆ.

3. ಆನಂತರ ಪೊಲೀಸರು ಬಂದು ಹೆಣವನ್ನು ಎತ್ತಿ ತೆಗೆದರು. ಆ ಶವ ನನ್ನ ತಮ್ಮನಾದಾಗಿತ್ತು. ಆಗ ನಾನು ಹೇಳಿಕೆ ನೀಡಿರುತ್ತೇನೆ. ದೂರು ಕೊಟ್ಟ ನಂತರ ಪೊಲೀಸರು ನನ್ನ ಮನೆ ಬಳಿ ಬಂದು ಮಹಜರ್ ಮಾಡಿದರು. ಆಗ ರಿಪೀಸ್ ಪಟ್ಟಿ ಪೊಲೀಸರಿಗೆ ನೀಡಿದ್ದು ಅದನ್ನು ಅಮಾನತ್ತು ಪಡಿಸಿಕೊಂಡಿದ್ದರು. ಆ ಮಹಜರ್ ನಿಶಾನೆ ಪಿ -2 ಎಂತಲೂ ಸಾಕ್ಷಿ ಗುರುತಿಸಿದ ತನ್ನ ಹೆಬ್ಬೆಟ್ಟನ್ನು ನಿಶಾನೆ ಪಿ -2(ಎ) ಎಂತಲೂ ಗುರುತಿಸಿದೆ. ಆ ಎರಡು ರಿಪೀಸ್ ಪಟ್ಟಿಗಳನ್ನು ಸೀಲು ತೆಗೆದು ಬಟ್ಟೆಯನ್ನು ಬಿಚ್ಚಿ ಸಾಕ್ಷಿಗೆ ತೋರಿಸಿದಾಗ ಅವರು ಗುರುತಿಸಿದ್ದು ಅದನ್ನು ಮು.ಮಾ 1 ಮತ್ತು 2 ಎಂದು ಗುರುತಿಸಿದೆ. ನನ್ನ ತಮ್ಮ ಮತ್ತು ಚಾಸಾ-2 ಮತ್ತು 3 ರವರಿಗೆ ಹೊಡೆದವರು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಆಗಿರುತ್ತಾರೆ. ನನ್ನ ತಮ್ಮನ ಹೆಣವನ್ನು ಎತ್ತಿ ತೆಗೆದಾಗ ತೆಗೆದ ಎರಡು ಪೋಟೋಗಳನ್ನು ಈಗ ನೋಡುತ್ತಿದ್ದು

Dt.01.08.2023.

ಅದರಲ್ಲಿ ನಾನು ಕಂಡು ಬರುತ್ತೇನೆ. ಆ ಎರಡು ಫೋಟೋಗಳನ್ನು ನಿಶಾನೆ ಪಿ -3 ಮತ್ತು 4 ಎಂದು ಗುರುತಿಸಿದೆ.

ಪಾಟೀ ಸವಾಲುಃ ಶ್ರೀ.ಟಿ ಸುರೇಶ್ ವಕೀಲರಿಂದ ಆರೋಪಿತರ ಪರವಾಗಿಃ

4. ನಾನು ತೋಟದಲ್ಲಿ ಕೂಲಿ ಕೆಲಸ ಮಾಡುತ್ತಿಲ್ಲ. ನಿಶಾನೆ ಪಿ -1 ರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ಅದ್ದರಿಂದ ನಿಶಾನೆ ಪಿ -1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ದೂರನ್ನು ನೀಡಿದ ದಿನಾಂಕ ಗೊತ್ತಿಲ್ಲ. ಭಯ ಆಯಿತ್ತು ಎಂದು ದೂರು ನೀಡಿರುತ್ತೇನೆ. ಚಾಸಾ -2 ಮತ್ತು 3 ರವರು ನಮ್ಮ ಮನೆಗೆ ಬಂದ್ದದ್ದು ಒಂದೂವರೆ ವರ್ಷದ ಹಿಂದೆ. ದಿನಾಂಕ ಮತ್ತು ತಿಂಗಳು ನೆನಪಿಲ್ಲ. ನನ್ನ ತಮ್ಮ ಅಟ್ಟ ಚಾಸಾ-2 ಮತ್ತು 3 ರವರನ್ನು ತಮ್ಮ ಜಮೀನಿನ ಮೂಲಕ ಕರೆದುಕೊಂಡು ಬರಬೇಡ ಎಂದು ಆರೋಪಿತರು ಹೊಡೆದಿದ್ದರು. ಆರೋಪಿತರು ಕಟಕನಪಾಳ್ಯದಲ್ಲಿಯೇ ವಾಸವಾಗಿದ್ದರು. ನನ್ನ ತಮ್ಮ ಓಡಿಯಾಡುತ್ತಿದ್ದ ಜಾಗ ಗ್ರಾಮಕ್ಕೆ ಹೊಂದಿಕೊಂಡ ಜಾಗ ಎಂದರೆ ಸರಿ. ಹಾಗಾದ್ದರಿಂದ ಅಲ್ಲಿ ಜಮೀನುಗಳು ಇಲ್ಲ ಎಂದರೆ ಸರಿ. ಜಾಗದ ವಿಚಾರಕ್ಕೆ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಆ ಜಾಗವು ಸರ್ಕಾರಿ ರಸ್ತೆಯಾಗಿತ್ತು. ರಾತ್ರಿ 9.00 ಗಂಟೆಗೆ ಗಲಾಟೆಯಾಗಿತ್ತು. ಸಾಮಾನ್ಯವಾಗಿ ರಾತ್ರಿ 7.30 ಮತ್ತು 8.00 ಗಂಟೆ ಹೊತ್ತಿಗೆ ಊಟ

Dt.01.08.2023.

ಮಾಡಿ ಮಲಗುತ್ತಾರೇಂದರೆ ಸರಿ. ಸೋಲರ್ ಬೆಳಕಿನಲ್ಲಿ ಗಲಾಟೆ ನೋಡಿರುತ್ತೇನೆ. ನಮ್ಮ ಮನೆಯ ಹಿಂದುಗಡೆ ಇರುವ ರಸ್ತೆಯಲ್ಲಿ ಗಲಾಟೆಯಾಗಿರುತ್ತದೆ. ಅಲ್ಲಿ ಯಾವುದೇ ಜಮೀನು ಇಲ್ಲ ಮತ್ತು ಅದ್ದರಿಂದ ಗಲಾಟೆ ನಡೆದೇ ಇಲ್ಲವೆಂದರೆ ಸರಿಯಲ್ಲ. ಮಾಗಡಿ ಆಸ್ಪತೆಗೆ ಸೇರಿಸಿದ ದಿನಾಂಕ ಗೊತ್ತಿಲ್ಲ. ಆ ದಿನ ಚಿಕಿತ್ಸೆ ಪಡೆದು ಮನೆಗೆ ಬಂದರು ಎಂದರೆ ಸರಿಯಲ್ಲ. ಅಲ್ಲಿಂದ ಬೆಂಗಳೂರಿನ ನಿಮ್ಹಾನ್ಸ್ ಗೆ ಕರೆದುಕೊಂಡು ಹೋಗಿ  ನಂತರ ಮನೆಗೆ ಬಂದರು. ಆನಂತರ ನನ್ನ ತಮ್ಮ ಚೆನ್ನಾಗಿ ಓಡಾಡಿಕೊಂಡು ಇದ್ದರು ಎಂದರೆ ಸರಿಯಲ್ಲ. ಆನಂತರ ಮನೆಯಲ್ಲಿ ಒಂದೂವರೆ ತಿಂಗಳು ಇದ್ದರು. ಆನಂತರ ಯಾವ ದಿನಾಂಕದಂದು ಆಸ್ಪ್ತತೆಗೆ ಕರೆದುಕೊಂಡು ಹೋದರು ಎಂದು ಹೇಳಲು ಬರುವುದಿಲ್ಲ. ಗಲಾಟೆಯಾದ ನಂತರ ಚಾಸಾ-2 ಮತ್ತು 3 ರವರು ತಮ್ಮ ಮನೆಗೆ ಹೊರಟು ಹೋದರು ಎಂದರೆ ಸರಿ. ಆನಂತರ ಅವರು ಮತ್ತೆ ನಮ್ಮ ಮನೆಗೆ ಬಂದಿಲ್ಲ. ನನಗೆ ಭಯವಾದ ಬಗ್ಗೆ ದೂರಿನಲ್ಲಿ ಬರೆದಿಲ್ಲ ಎಂದರೆ ಸರಿ. ನನ್ನ ತಮ್ಮ ತೀರಿಕೊಂಡ ದಿನಾಂಕ ಮತ್ತು ಸಮಯ ಹೇಳಲು ಬರುವುದಿಲ್ಲ. ಅವರು ಕಟುಕನಪಾಳ್ಯದಲ್ಲಿ ಮೃತ ಪಟ್ಟರು. ಮಾರನೇ ದಿನ ಅಂತ್ಯಕ್ರಿಯೆ ಮಾಡಿದ್ದೆವು . ಆಗ ದೂರು ನೀಡಲು ಮತ್ತು ಶವ ಪರೀಕ್ಷೆ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಗಲಾಟೆಯಾದಾಗ ಆ ಜಾಗದಲ್ಲಿ ನಾನು ಇರಲಿಲ್ಲ. ದೂರಿಗೆ ಠಾಣೆಯಲ್ಲಿ ಸಹಿ ವೂಡಿರುತ್ತೇನೆ. ಆರೋಪಿಗಳು ಯಾವುದರಿಂದ

Dt.01.08.2023.

ಹೊಡೆದರು ಎಂದು ನಾನು ನೋಡಿಲ್ಲ ಎಂದರೆ ಸರಿಯಲ್ಲ. ರಿಪೀತ್ ಪಟ್ಟಿಯನ್ನು ನಾನೇ ಪೊಲೀಸರಿಗೆ ನೀಡಿದ್ದೇನೆ. ರಿಪೀಸ್ ಪಟ್ಟಿ ನಮ್ಮ ಮನೆಯಲ್ಲಿತ್ತು ಎಂದರೆ ಸರಿಯಲ್ಲ. ಈ ರೀತಿಯ ರಿಪೀಸ್ ಪಟ್ಟಿ ಎಲ್ಲಾ ಕಡೆ ಸಿಗುತ್ತವೆಂದರೆ ಸರಿ. ನನಗೂ ಮತು 7 ನೇ ಆರೋಪಿತರಿಗೆ ಮತ್ತು ಅವರ ಮಕ್ಕಳಿಗೆ ವೈಮನಸ್ಸು ಇತ್ತು ಎಂದರೆ ಸರಿ. ಹಾಗಾಗಿ ಅವರ ವಿರುದ್ಧ ಸುಳ್ಳು ದೂರು ನೀಡಿದ್ದೆ ಎಂದರೆ ಸರಿಯಲ್ಲ. ರಿಪೀತ್ ಪಟ್ಟಿಯ ಉದ್ದ ಮತ್ತು ಅಗಲ ಗೊತ್ತಿಲ್ಲ. ಆ ದಿನ ಆದ ಗಲಾಟೆಯಿಂದ ನನ್ನ ತಮ್ಮ ತೀರಿಕೊಂಡಿಲ್ಲ ಮತ್ತು ಬೇರೆ ಅನಾರೋಗ್ಯ ದಿಂದ ತೀರಿಕೊಂಡಿದ್ದಾರೆಂದರೆ ಸರಿಯಲ್ಲ. ಗಲಾಟೆಯಾದ ದಿನ ದೂರು ನೀಡಲು ತೊಂದರೆ ಇರಲಿಲ್ಲ. ನನಗೂ ಮತ್ತು ಆರೋಪಿತರಿಗೂ ದ್ವೇಷ ಇದ್ದಿದರಿಂದ ಆರೋಪಿತರ ವಿರುದ್ಧ ಒಂದೂವರೆ ತಿಂಗಳ ನಂತರ ಸುಳ್ಳು ದೂರು ನೀಡಿದ್ದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ದೇವರಾಜ ಭಟ್ಟ ಎಂ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.